# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾದಂ. ನ್ಯಾಯಾಲಯ, ಕುಣಿಗಲ್.

## ಸಿ.ಸಿ. 3709/2022

ಫಿರ್ಯಾದುದಾರರುಃ ಹುಲಿಯಾರುದುರ್ಗ ಪೊಲೀಸರು

ವಿರುದ್ಧ

ಆರೋಪಿಗಳು : ವರದರಾಜು ಉರಫ್ ಕುಮಾರ್
ಮತ್ತು ಇತರರು

## ***ದೋಷಾರೋಪಣೆ***

**ಶ್ರೀಮತಿ ಗಂಗವ್ವ. ಆಯಟ್ಟಿ ,** ಬಿ.ಎ.ಎಲ್..ಎಲ್.ಬಿ., (Hon's) ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್ ಆದು ನಾನು, 3 ನೇ ಆರೋಪಿಗಳಾದ,

| | |
|---|---|
| 1 | ವರದರಾಜು ಉರಫ್ ಕುಮಾರ್<br>ತಂದೆಃ ಲೇಟ್ ಹೇಮಗಿರಿಗೌಡ<br>ವಯಸ್ಸುಃ 33 ವರ್ಷ, |
| 2 | ಹೇಮರಾಜು.ಉರಫ್ ರಾಜು<br>ತಂದೆಃ ಲೇಟ್ ಹೇಮಗಿರಿಗೌಡ<br>ವಯಸ್ಸುಃ 42 ವರ್ಷ |
| 3 | ಚಿಕ್ಕತಾಯಮ್ಮಾ ಕೋಂ. ಲೇಟ್ ಹೇಮಗಿರಿಗೌಡ<br>ವಯಸ್ಸುಃ 63 ವರ್ಷ |
| 4 | ಲಾವಣ್ಯ . ಕೋಂ.ವರದಯ್ಯ<br>ವಯಸ್ಸುಃ 24 ವರ್ಷ |

| | |
|---|---|
| 5 | ಮಲ್ಲಮ್ಮಾ<br>ಕೋಂ.ಕೆಂಪಹಲಗಯ್ಯ<br>ವಯಸ್ಸು 65 ವರ್ಷ<br>ಎಲ್ಲರ ವಾಸಃ ಚಲಮಸಂದ್ರ  ಗ್ರಾಮ<br>ಹುಲಿಯಾರುದುರ್ಗ ಹೋಬಳಿ, ಕುಣಿಗಲ್<br>ತಾಲ್ಲೂಕು |

ನಿಮ್ಮ ಮೇಲೆ ಇಡುವ ಆರೋಪಗಳು ಏನೆಂದರೆ,

ದಿನಾಂಕಃ 17.02.2022 ರಂದು  ಬೆಳಿಗ್ಗೆ  8.30 ಗಂಟೆಯ ಸಮಯದಲ್ಲಿ ಕುಣಿಗಲ್ ತಾಲ್ಲೂಕು, ಹುಲಿಯಾರುದುರ್ಗ ಪೋಲಿಸ್ ಠಾಣೆಯ ವ್ಯಾಪ್ತಿಯ ಚಲಮಸಂದ್ರ ಗ್ರಾಮದಲ್ಲಿ  ಚಾ.ಸಾ.1 ಮತ್ತು 2 ಅವರು ವಾಸ ಇರುವ ಮನೆಯ ಮರದ ತೀರುಗಳು ಕುಟ್ಟೇ ಬಿದ್ದಿದ್ದು ಅವುಗಳನ್ನು ತೆಗೆದುಹಾಕಿ ಕಬ್ಬಿಣದ ಹ್ಯಾಂಗಲ್ ಗಳನ್ನು ಹಾಕಿ ಮನೆ ರೀಪೇರಿ ಮಾಡುವ ಸಮಯದಲ್ಲಿ ಆರೋಪಿತರಾದ ನೀವುಗಳು ಅಕ್ರಮ ಗುಂಪು ಕಟ್ಟಿಕೊಂಡು ಬಂದ ಪ್ರಯುಕ್ತ ಭಾ.ದಂ.ಸಂ. ಕಲಂ 143  ಸಹವಾಚಕ 149ರ  ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ  ಅಪರಾಧ ಎಸಗಿರುತ್ತೀರಿ?

ಮೇಲೆ  ಹೇಳಿದ ದಿನಾಂಕ,  ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ  ಉದ್ದೇಶದಿಂದ ಚಾ.ಸಾ.1 ಮತ್ತು 2 ಅವರಿಗೆ  ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಶಾಂತಿ ಭಂಗ ಮಾಡಿದ ಪ್ರಯುಕ್ತ  ಭಾ.ದಂ.ಸಂ. ಕಲಂ 504 ಸಹವಾಚಕ 149ರ  ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ  ಅಪರಾಧ ಎಸಗಿರುತ್ತೀರಿ?

ಮೇಲೆ  ಹೇಳಿದ ದಿನಾಂಕ,  ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ  ಉದ್ದೇಶದಿಂದ ಚಾ.ಸಾ. 1 ಮತ್ತು 2  ಅವರಿಗೆ ಬೈಯುತ್ತಿದ್ದಾಗ ಚಾ.ಸಾ.1 ಏಕೆ ಬೈಯುತ್ತಿದ್ದೀರಾ ಎಂದು ಕೇಳಿದ್ದಕ್ಕೆ ಅವರನ್ನು ಆರೋಪಿ 3-5 ಆದ ನೀವು  ಹಿಡಿದು ಎಳೆದಾಡಿ ಕಲ್ಲಿನಿಂದ ಮೈ ಕೈಗೆ ಗುದ್ದಿ ನೋವುಂಟು  ಪ್ರಯುಕ್ತ ಭಾ.ದಂ.ಸಂ. ಕಲಂ 324  ಸಹವಾಚಕ

149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪತರಾದ ನೀವು ಸಮಾನ ಉದ್ದೇಶದಿಂದ ಆರೋಪಿ 3–5 ಆದ ನೀವು ಚಾ.ಸಾ. 1 ಅವರ ಮೈ ಕೈಗೆ ಹೊಡೆದಿದ್ದು ಚಾ.ಸಾ.2 ಅವರು ಬಿಡಿಸಿಕೊಳ್ಳಲು ಹೋದಾಗ ಆರೋಪಿ 4 ಮತ್ತು 5 ಆದ ನೀವು ಅವರಿಗೂ ಸಹ ಮೈ ಕೈಗೆ ಕೈಗಳಿಂದ ಹೊಡೆದು ಗಾಯ ಪಡಿಸಿದರ ಪ್ರಯುಕ್ತ ಭಾ.ದಂ.ಸಂ. ಕಲಂ 323 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿವೇನಾದರೂ ಮನೆ ರೀಪೇರಿ ಮಾಡಲು ಮುಂದಾದರೆ ನಿಮ್ಮನ್ನು ಬಿಡುವುದಿಲ್ಲ ಕತ್ತರಿಸಿ ಹಾಕುತ್ತೇವೆ ಎಂದು ಜೀವ ಬೆದರಿಗೆ ಹಾಕಿದ ಪ್ರಯುಕ್ತ ಭಾ.ದಂ.ಸಂ. ಕಲಂ 506 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 28 ನೇ ಡಿಸೆಂಬರ್ –2023

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.

ಪ್ರಶ್ನೆ ಃ 1 ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 4 :

ಆರೋಪಿ 5

ಪ್ರಶ್ನೆ ಃ 2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 4 :

ಆರೋಪಿ 5 :

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 28 ನೇ ಡಿಸೆಂಬರ್ –2023

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.